**<u>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಮತ್ತು ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಇವರುಗಳು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಹೇಳಿಕೆ:-</u>**

ವಿಷಯ :

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 3 ಎಕರೆ 23 ಗುಂಟೆ ಜಮೀನನ್ನು ಬಿ.ಡಿ.ಎ ಭೂಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ತದನಂತರ ಬಿ.ಡಿ.ಎ ಬಡಾವಣೆ ರಚನೆ ಮಾಡಿ, ನಿರ್ಮಾಣ ಮಾಡಿ, ನಿವೇಶನಗಳನ್ನು ಹಂಚಿಕೆ ಮಾಡಿ, ಹಂಚಿಕೆಯಾದ ಸುಮಾರು 40 ವರ್ಷಗಳ ನಂತರ ಸದರಿ ಸರ್ಕಾರಿ ಸ್ವತ್ತನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿ ಕಬಳಿಸಿಕೊಂಡಿರುತ್ತಾನೆ. ಇದರಲ್ಲಿ ಬಿ.ಡಿ.ಎ ಅಧಿಕಾರಿಗಳು ಷಾಮೀಲಾಗಿರುತ್ತಾರೆ. ಮುಂದುವರೆದು, ಸದರಿ ಖಾಸಗಿ ವ್ಯಕ್ತಿಯು ಆ ಸ್ವತ್ತನ್ನು ಬೇರೆಯವರಿಗೆ ಮರು ಮಾರಾಟ ಮಾಡಿರುವುದು ಹಾಗೂ ಜಾಯಿಂಟ್ ವೆಂಚರ್ ಮೂಲಕ ಒಡಂಬಡಿಕೆ ಮಾಡಿಕೊಂಡಿರುವುದರಿಂದ, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಭಾಗಿಯಾದ ಬಿ.ಡಿ.ಎ ಅಧಿಕಾರಿಗಳು ಹಾಗೂ ಖಾಸಗಿ ವ್ಯಕ್ತಿಯ ವಿರುದ್ಧ ಇದುವರೆವಿಗೂ ಯಾವುದೇ ಕಾನೂನು ಕ್ರಮ ಜರುಗಿಸದೆ ಇರುವುದರಿಂದ, ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ :-**

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 3 ಎಕರೆ 23 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಿ.ಟಿ.ಎಂ. 4ನೇ ಹಂತದ ಬಡಾವಣೆ ರಚನೆಗಾಗಿ ಪ್ರಾರಂಭಿಕ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಸಂಖ್ಯೆ:ಹೆಚ್‌ಯುಡಿ/334/ಎಂಎನ್‌ಎಕ್ಸ್/1990, ದಿನಾಂಕ:03.11.1990 ರಂದು ಹೊರಡಿಸಲಾಗಿದೆ. ಸದರಿ ಜಮೀನಿಗೆ ಐತೀರ್ಪು ಅನುಮೋದನೆಯಾಗಿದ್ದು, ಬಡಾವಣೆ ರಚನೆಗಾಗಿ ದಿನಾಂಕ:30.11.1996 ರಂದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿರುತ್ತದೆ. ಭೂಸ್ವಾಧೀನ ಕಾಯ್ದೆ 1894 ರ ಸೆಕ್ಷನ್ 16(2) ರಡಿ ಹೊರಡಿಸಿರುವ ಅಧಿಸೂಚನೆಯನ್ನು ದಿನಾಂಕ:08.02.2001 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯವಾಗಿರುತ್ತದೆ.

ನಂತರ ಶ್ರೀಮತಿ ಶಾಂತಮ್ಮ ಮತ್ತು ಇತರರು ಭೂಸ್ವಾಧೀನದ ಕ್ರಮವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:41386-395/2017 ರಂತೆ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ದಿನಾಂಕ:24.10.2019 ರಂದು ಅಂತಿಮ ಆದೇಶವಾಗಿರುತ್ತದೆ. ಅರ್ಜಿದಾರರು ದಿನಾಂಕ:14.01.2020 ರಂದು ಹಿಂಬರಹ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ಕಾನೂನು ವಿಭಾಗದ ಅಭಿಪ್ರಾಯದಂತೆ ಸದರಿ ಸರ್ವೆ ನಂಬರಿನ ವಾಸ್ತವಾಂಶದ ಮಾಹಿತಿಯನ್ನು ಅರ್ಜಿದಾರರಿಗೆ ನಿಯಮಾನುಸಾರ ಹಿಂಬರಹದ ಮೂಲಕ ನೀಡಲಾಗಿದ್ದು, ಸದರಿ ಹಿಂಬರಹವು ನಿರಾಕ್ಷೇಪಣಾ ಪತ್ರವಾಗಿರುವುದಿಲ್ಲ. ಆದಾಗ್ಯೂ, ಸದರಿ ಹಿಂಬರಹವು ದುರುಪಯೋಗವಾಗುತ್ತಿರುವುದು ಚರ್ಚೆಯಲ್ಲಿರುವುದರಿಂದ ಮಾನ್ಯ ನ್ಯಾಯಾಲಯದ ಆದೇಶವನ್ನು ಮತ್ತೊಮ್ಮೆ ಕಾನೂನಾತ್ಮಕವಾಗಿ ಪರಿಶೀಲಿಸಿ, ರಿಟ್ ಅರ್ಜಿ ಸಂಖ್ಯೆ:41386-395/2017 ರ ಆದೇಶದ ವಿರುದ್ಧ ಮಾನ್ಯ ವಿಭಾಗೀಯ ಪೀಠದ ಮುಂದೆ ಮೇಲ್ಮನವಿ ಸಂಖ್ಯೆ:398/20-21 ನ್ನು ದಾಖಲಿಸಲಾಗಿದೆ.

ಸಂಖ್ಯೆ: ನಅಇ 313 ಬೆಂಭೂಸ್ವಾ 2022

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ